# ಏಷಿಯಾಟಿಕ್ ಸೊಸೈಟಿ ಅಧಿನಿಯಮ, 1984

(1984ರ ಅಧಿನಿಯಮ ಸಂಖ್ಯೆ 5)

**[19-4-2004ರ ಭಾರತ ರಾಜಪತ್ರದ IX ನೇ ಭಾಗದ, 29ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 44ರಿಂದ 48ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು :**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಏಷಿಯಾಟಿಕ್ ಸೊಸೈಟಿಯನ್ನು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ ಎಂದು ಘೋಷಿಸುವುದು
3. ಪರಿಭಾಷೆಗಳು
4. ಕೇಂದ್ರ ಸರ್ಕಾರದಿಂದ ಸೊಸೈಟಿಗೆ ಅನುದಾನ, ಸಾಲ, ಇತ್ಯಾದಿಗಳು
5. ಸೊಸೈಟಿಯ ಲೆಕ್ಕ ಪತ್ರಗಳ ಪರಿಶೋಧನೆ
6. ವಾರ್ಷಿಕ ವರದಿ
7. ಸೊಸೈಟಿಯ ಕೆಲವು ಕಾರ್ಯಗಳಿಗೆ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಅವಶ್ಯಕತೆ
8. ಯೋಜನಾ ಮಂಡಲಿ
9. ಸಮಿತಿಗಳು
10. ಮಾಡಿದ ಕೆಲಸದ ಪುನರವಲೋಕನ, ಆಸ್ತಿಗಳ ಪರಿಶೀಲನೆ ಇತ್ಯಾದಿ
11. ಸಮಿತಿಗಳಿಗೆ ಸೊಸೈಟಿಯು ಸೌಲಭ್ಯಗಳನ್ನು ಒದಗಿಸುವುದು
12. ಸೊಸೈಟಿಗೆ ನಿರ್ದೇಶನಗಳನ್ನು ನೀಡಲು ಅಧಿಕಾರ
13. ನಿಯಂತ್ರಣದ ಪ್ರಕಾರ್ಯಗಳನ್ನು ವಹಿಸಿಕೊಳ್ಳಲು ಕೇಂದ್ರ ಸರ್ಕಾರದ ಅಧಿಕಾರ
14. ಅಧ್ಯಾರೋಹಿ ಪರಿಣಾಮ ಹೊಂದಿರುವ ಅಧಿನಿಯಮ
15. ನಿಯಮ ರಚನಾಧಿಕಾರ.

# ಏಷಿಯಾಟಿಕ್ ಸೊಸೈಟಿ ಅಧಿನಿಯಮ, 1984

(1984ರ ಅಧಿನಿಯಮ ಸಂಖ್ಯೆ 5)

[23ನೇ ಮಾರ್ಚ್ 1984]

ಏಷಿಯಾಟಿಕ್ ಸೊಸೈಟಿ ಎಂದು ಕರೆಯಲಾಗುವ, ಪ್ರಸ್ತುತ ಕಲ್ಕತ್ತದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಸಂಸ್ಥೆಯನ್ನು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ ಎಂದು ಘೋಷಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳಿಗಾಗಿ ಉಪಬಂಧ– ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು: –

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಏಷಿಯಾಟಿಕ್ ಸೊಸೈಟಿ ಅಧಿನಿಯಮ, 1984 ಎಂದು ಕರೆಯತಕ್ಕುದು.

(2) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕುದು.

* ದಿನಾಂಕದಂದು 25.6.1984 ರಂದು ಜಾರಿಗೆ ಬಂದಿದೆ. ಜಿಎಸ್‌ಆರ್ 470 (ಇ) ದಿನಾಂಕ 25.6.1984 ಭಾರತ ರಾಜಪತ್ರದ ಭಾಗ II– ಸೆಕ್ಷನ್ 3(ಸಿ) ದಿನಾಂಕ 25.6.1984 ನೋಡಿ.

**2. ಏಷಿಯಾಟಿಕ್ ಸೊಸೈಟಿಯನ್ನು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ ಎಂದು ಘೋಷಿಸುವುದು.**– ದಿವಂಗತ ವಿಲಿಯಂ ಜೋನ್ಸ್‌ರವರು 1784ರ ಜನವರಿ 15ನೇ ದಿನಾಂಕದಂದು ಏಷಿಯಾಟಿಕ್ ಸೊಸೈಟಿ ಎಂದು ಕರೆಯಲಾಗುವ ಸಂಸ್ಥೆಯನ್ನು ಕಲ್ಕತ್ತದಲ್ಲಿ ಸ್ಥಾಪಿಸಿದ್ದು, ಆ ಸಂಸ್ಥೆಯು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆಯನ್ನಾಗಿಸುವಂಥ ಗುರಿಗಳನ್ನು ಹೊಂದಿರುವುದರಿಂದ, ಸದರಿ ಏಷಿಯಾಟಿಕ್ ಸೊಸೈಟಿಯನ್ನು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ ಎಂದು ಈ ಮೂಲಕ ಘೋಷಿಸಲಾಗಿದೆ.

**3. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಜ್ಞಾಪನ ಪತ್ರ" ಎಂದರೆ, ಸೊಸೈಟಿಯ ಸಂಸ್ಥಾಪನಾ ಪತ್ರ;

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಸಿ) "ವಿನಿಯಮಗಳು" ಎಂಬುದರಲ್ಲಿ ಪಶ್ಚಿಮ ಬಂಗಾಳ ಸೊಸೈಟಿಗಳ ನೋಂದಣಿ ಅಧಿನಿಯಮ, 1961 (ಪಶ್ಚಿಮ ಬಂಗಾಳ ಅಧಿನಿಯಮ 1961ರ XXVI) ರ ಮೇರೆಗೆ, ಸೊಸೈಟಿಯು ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಯಾವ ನಿಯಮ ಅಥವಾ ವಿನಿಯಮವನ್ನು ರಚಿಸಲು ಸಕ್ಷಮವಾಗಿರುವುದೋ ಆ ನಿಯಮ ಅಥವಾ ವಿನಿಯಮವನ್ನು (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ಒಳಗೊಳ್ಳುತ್ತವೆ. ಆದರೆ ತನ್ನ ದೈನಂದಿನ ಆಡಳಿತದ ನಡವಳಿಕೆಗೆ ವಿನಿಯಮಗಳ ಮೇರೆಗೆ ಮಾಡಲಾದ ಯಾವುದೇ ಉಪವಿಧಿಗಳನ್ನು ಅಥವಾ ಸ್ಥಾಯೀ ಆದೇಶಗಳನ್ನು ಒಳಗೊಳ್ಳತಕ್ಕದ್ದಲ್ಲ.

(ಡಿ) "ಸೊಸೈಟಿ" ಎಂದರೆ, ಪಶ್ಚಿಮ ಬಂಗಾಳ ಸೊಸೈಟಿಗಳ ನೋಂದಣಿ ಅಧಿನಿಯಮ, 1961ರ (ಪಶ್ಚಿಮ ಬಂಗಾಳ ಅಧಿನಿಯಮ, 1961ರ XXVI) ಅರ್ಥವ್ಯಾಪ್ತಿಯಲ್ಲಿ ಒಂದು ಸೊಸೈಟಿಯಾಗಿರುವ ಮತ್ತು ಕಲ್ಕತ್ತದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಏಷಿಯಾಟಿಕ್ ಸೊಸೈಟಿ.

**4. ಕೇಂದ್ರ ಸರ್ಕಾರದಿಂದ ಸೊಸೈಟಿಗೆ ಅನುದಾನ, ಸಾಲ, ಇತ್ಯಾದಿಗಳು.**– ಸೊಸೈಟಿಯು ವಿಶೇಷವಾಗಿ ಸಂಶೋಧನೆ, ಸಾಹಿತ್ಯಕ, ಗ್ರಂಥಾಲಯ, ವೈಜ್ಞಾನಿಕ ಮತ್ತು ವಸ್ತು ಸಂಗ್ರಹ ಚಟುವಟಿಕೆಗಳು, ಹಸ್ತಪ್ರತಿಗಳು, ನಾಣ್ಯಗಳು ಮತ್ತು ಕಲಾ ವಸ್ತುಗಳ ಸಂಗ್ರಹಣೆ ಹಾಗೂ ನಿಯತಕಾಲಿಕೆಗಳು, ಪುಸ್ತಕಗಳು ಮತ್ತು ಇತರ ಸಾಹಿತ್ಯ ಪ್ರಕಟಣೆಗಳಿಗೆ ಸಂಬಂಧಪಟ್ಟ ಚಟುವಟಿಕೆಗಳೂ ಸೇರಿದಂತೆ, ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ

ನಿರ್ವಹಿಸಲು ಅದನ್ನು ಕೇಂದ್ರ ಸರ್ಕಾರವು ಸಮರ್ಥಗೊಳಿಸುವ ಉದ್ದೇಶಕ್ಕಾಗಿ, ಈ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಜನೆಯ ನಂತರ ಪ್ರತಿ ಆರ್ಥಿಕ ವರ್ಷದಲ್ಲಿ ಅನುದಾನಗಳು, ಸಾಲಗಳ ರೂಪದಲ್ಲಿ ಅಥವಾ ಅನ್ಯಥಾ ಆ ಸರ್ಕಾರವು ಅವಶ್ಯವೆಂದು ಪರಿಗಣಿಸುವಂಥ ಹಣದ ಮೊತ್ತವನ್ನು ಸೊಸೈಟಿಗೆ ಸಂದಾಯ ಮಾಡಬಹುದು.

5. **ಸೊಸೈಟಿಯ ಲೆಕ್ಕ ಪತ್ರಗಳ ಪರಿಶೋಧನೆ.–** (1) ಸೊಸೈಟಿಯು, ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಜಮಾ ಖರ್ಚು ಪಟ್ಟಿಯೂ ಸೇರಿದಂತೆ ಲೆಕ್ಕ ಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅನುಮೋದಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು.

(2) ಸೊಸೈಟಿಯ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಪರಿಶೋಧನೆಯ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕನು ವಹಿಸಿದ ಯಾವುದೇ ವೆಚ್ಚವನ್ನು ಸೊಸೈಟಿಯು ಅವನಿಗೆ ಸಂದಾಯ ಮಾಡತಕ್ಕದ್ದು.

(3) ಸೊಸೈಟಿಯ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಪರಿಶೋಧಕನು ಪರಿಶೋಧನೆಯ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವಂತಹವೇ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ-ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಮಾಡುವ ಮತ್ತು ಸೊಸೈಟಿಯ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಈ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಪ್ರಮಾಣೀಕರಿಸಿರುವ ಸೊಸೈಟಿಯ ಲೆಕ್ಕಪತ್ರಗಳನ್ನು ಅದರ ಲೆಕ್ಕಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ವಾರ್ಷಿಕವಾಗಿ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

**6. ವಾರ್ಷಿಕ ವರದಿ.–** ಸೊಸೈಟಿಯು, ಹಿಂದಿನ ವರ್ಷದ ತನ್ನ ಪೂರ್ಣ ಚಟುವಟಿಕೆಗಳು, ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪೂರ್ಣ ವಿವರವನ್ನು ನೀಡಿ ತನ್ನ ವಾರ್ಷಿಕ ವರದಿಯನ್ನು ಪ್ರತಿ ವರ್ಷ ನಿರ್ದೇಶಿಸಬಹುದಾದಂಥ ಸಮಯದಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು ಮತ್ತು ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

**7. ಸೊಸೈಟಿಯ ಕೆಲವು ಕಾರ್ಯಗಳಿಗೆ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಅವಶ್ಯಕತೆ.–** ಸೊಸೈಟಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಹೊರತು,–

(ಎ) ಅದನ್ನು ಯಾವ ಉದ್ದೇಶಗಳಿಗಾಗಿ ಸ್ಥಾಪಿಸಲಾಗಿದೆಯೋ ಅಥವಾ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವ ಕಾರಣಕ್ಕಾಗಿ ಅದನ್ನು ಉಪಯೋಗಿಸಲಾಗುತ್ತಿದೆಯೋ ಅಂತಹ ಯಾವುದೇ ಉದ್ದೇಶವನ್ನು ಬದಲಾಯಿಸತಕ್ಕದ್ದಲ್ಲ, ವಿಸ್ತರಿಸತಕ್ಕದ್ದಲ್ಲ ಅಥವಾ ಸಂಕ್ಷೇಪಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ಇತರ ಸಂಸ್ಥೆ ಅಥವಾ ಸೊಸೈಟಿಯೊಂದಿಗೆ ಪೂರ್ಣವಾಗಿಯಾಗಲಿ ಅಥವಾ ಭಾಗಶ: ವಾಗಿಯಾಗಲಿ ಸಮ್ಮಿಲನಗೊಳಿಸತಕ್ಕದ್ದಲ್ಲ; ಅಥವಾ

(ಬಿ) ಜ್ಞಾಪನಪತ್ರವನ್ನು ಅಥವಾ ವಿನಿಯಮಗಳನ್ನು ಯಾವುದೇ ರೀತಿಯಲ್ಲಿ ಬದಲಾಯಿಸತಕ್ಕದ್ದಲ್ಲ ಅಥವಾ ತಿದ್ದುಪಡಿ ಮಾಡತಕ್ಕದ್ದಲ್ಲ; ಅಥವಾ

(ಸಿ) ಕೇಂದ್ರ ಸರ್ಕಾರವು, ಸ್ವತ್ತನ್ನು ಆರ್ಜಿಸಲು ನಿರ್ದಿಷ್ಟವಾಗಿ ಒದಗಿಸಿದ ಹಣದಿಂದ ಸೊಸೈಟಿಯು ಹಾಗೆ ಆರ್ಜಿಸಿದ ಯಾವುದೇ ಸ್ವತ್ತನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೇ ಮಾಡತಕ್ಕದ್ದಲ್ಲ:

ಪರಂತು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಚರ ಸ್ವತ್ತು ಅಥವಾ ಚರ ಸ್ವತ್ತಿನ ವರ್ಗದ ಸಂಬಂಧದಲ್ಲಿ ಅಂತಹ ಅನುಮೋದನೆಯ ಅವಶ್ಯಕತೆ ಇರತಕ್ಕದ್ದಲ್ಲ; ಅಥವಾ

(ಡಿ) ವಿಸರ್ಜನೆಯಾಗತಕ್ಕದ್ದಲ್ಲ.

**8. ಯೋಜನಾ ಮಂಡಲಿ.**– (1) ಸೊಸೈಟಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸುವ ಮತ್ತು ಜಾರಿಗೊಳಿಸುವ ಮತ್ತು ಸೊಸೈಟಿಗೆ ಸಂಬಂಧಿಸಿದ ಇತರ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆಯನ್ನು ನೀಡುವ ಉದ್ದೇಶಕ್ಕಾಗಿ ಅದು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯೋಜನಾ ಮಂಡಲಿ (ಏಷಿಯಾಟಿಕ್ ಸೊಸೈಟಿ) ಎಂದು ಕರೆಯಲಾಗುವ ಒಂದು ಮಂಡಲಿಯನ್ನು ಸ್ಥಾಪಿಸಬಹುದು.

(2) ಮಂಡಲಿಯು, ಒಬ್ಬ ಅಧ್ಯಕ್ಷನನ್ನು ಮತ್ತು ಕೇಂದ್ರ ಸರ್ಕಾರವು ನೇಮಿಸಬಹುದಾದಂಥ ಇತರ ಸದಸ್ಯರುಗಳನ್ನು ಹೊಂದಿರತಕ್ಕದ್ದು.

(3) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು ಮಂಡಲಿಯು ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) ಮಂಡಲಿಯ ಸದಸ್ಯರ ಪದಾವಧಿಯು, ಅವರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ, ಅವರಲ್ಲಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿಮಾಡಬೇಕಾದ ರೀತಿ, ಸಂದಾಯ ಮಾಡಬೇಕಾದ ಭತ್ಯೆಗಳು, ಯಾವುದಾದರೂ ಇದ್ದರೆ ಅವು ಮತ್ತು ಸದಸ್ಯರಿಗೆ ಸಂಬಂಧಪಟ್ಟ ಇತರ ವಿಷಯಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**9. ಸಮಿತಿಗಳು.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಅವಶ್ಯ ಎಂದು ಪರಿಗಣಿಸಿದಾಗಲೆಲ್ಲ ನೇಮಕಮಾಡಲು ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರುವ ಸಮಿತಿಗಳನ್ನು ನೇಮಕ ಮಾಡಬಹುದು ಮತ್ತು ಈ ಮುಂದಿನ ಎಲ್ಲಾ ಅಥವಾ ಯಾವುವೇ ಕರ್ತವ್ಯಗಳನ್ನು ಅಂತಹ ಪ್ರತಿಯೊಂದು ಸಮಿತಿಗೆ ವಹಿಸಬಹುದು, ಎಂದರೆ:–

(ಎ) ಕೇಂದ್ರ ಸರ್ಕಾರವು ನಿಧಿ ಒದಗಿಸಬಹುದಾದ ಮತ್ತು ಹಣಕಾಸು ವರ್ಷದಲ್ಲಿ ಸೊಸೈಟಿಯು ಕೈಗೊಳ್ಳಲು ಒಪ್ಪಿಕೊಳ್ಳುವ ಕಾಮಗಾರಿಯ ಕಾರ್ಯಕ್ರಮಗಳನ್ನು ತೋರಿಸುವ ವಿವರಣಾ ಪತ್ರವನ್ನು ಹಾಗೂ ಅಂಥ ಕಾಮಗಾರಿಯ ಸಂಬಂಧದಲ್ಲಿನ ಸಾಮಾನ್ಯ ಹಣಕಾಸಿನ ಅಂದಾಜನ್ನು ಸಾಧ್ಯವಾದಷ್ಟು ಮಟ್ಟಿಗೆ ಪ್ರತಿ ಆರ್ಥಿಕ ವರ್ಷದ ಪ್ರಾರಂಭಕ್ಕೆ ಮುಂಚೆ ಸಿದ್ಧಪಡಿಸುವುದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು.

(ಬಿ) ಅಂತಹ ಕಾಮಗಾರಿಯ ಕಾರ್ಯಕ್ರಮಗಳನ್ನು ಸ್ಥೂಲವಾಗಿ ಇತ್ಯರ್ಥಗೊಳಿಸುವುದು.

(2) (1)ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ಸಮಿತಿಯು, ಈ ಪ್ರಕರಣದ ಮೇರೆಗಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ 8ನೇ ಪ್ರಕರಣದ ಮೇರೆಗೆ ಮಂಡಲಿಯು ಕೇಂದ್ರ ಸರ್ಕಾರಕ್ಕೆ ಅಂತಹ ವಿಷಯಗಳ ಸಂಬಂಧದಲ್ಲಿ ಯಾವುದಾದರೂ ಸಲಹೆಯನ್ನು ನೀಡಿದ್ದರೆ ಅದಕ್ಕೆ ಸೂಕ್ತ ಗಮನ ನೀಡತಕ್ಕದ್ದು.

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಮಿತಿಯು ಸೂಚಿಸಿದ ಯಾವುದೇ ಕಾಮಗಾರಿಯನ್ನು ಕೈಗೊಳ್ಳಲು ಸೊಸೈಟಿಯು ಒಪ್ಪದಿದ್ದಲ್ಲಿ ಹಾಗೆ ಒಪ್ಪದೇ ಇರುವ ಬಗ್ಗೆ ತನ್ನ ಕಾರಣಗಳನ್ನು ಕೇಂದ್ರ ಸರ್ಕಾರಕ್ಕೆ ನೀಡತಕ್ಕದ್ದು.

(4) (1)ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ಒಂದು ಸಮಿತಿಯು ತನ್ನ ಕಾರ್ಯವಿಧಾನಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ವಿಧಾನ, ಅಂತಹ ಸಮಿತಿಯ ಸದಸ್ಯರುಗಳಿಗೆ ಸಂದಾಯವಾಗಬೇಕಾದ ಭತ್ಯೆಗಳು ಯಾವುದಾದರೂ ಇದ್ದರೆ ಅವು ಮತ್ತು ಅಂತಹ ಸಮಿತಿಗೆ ಸಂಬಂಧಪಡುವ ಇತರ ವಿಷಯಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**10. ಮಾಡಿದ ಕೆಲಸದ ಪುನರವಲೋಕನ, ಆಸ್ತಿಗಳ ಪರಿಶೀಲನೆ ಇತ್ಯಾದಿ.**- (1) ಕೇಂದ್ರ ಸರ್ಕಾರವು ಈ ಮುಂದಿನ ಉದ್ದೇಶಕ್ಕಾಗಿ, ಅಂದರೆ.-

(ಎ) ಸೊಸೈಟಿಯು ನಿರ್ವಹಿಸಿದ ಕಾಮಗಾರಿ ಮತ್ತು ಅದು ಸಾಧಿಸಿದ ಪ್ರಗತಿಯ ಪುನರವಲೋಕನ;

(ಬಿ) ಸೊಸೈಟಿಯ ಕಟ್ಟಡಗಳು, ಸಾಧನ ಸಲಕರಣೆ ಮತ್ತು ಇತರ ಆಸ್ತಿಗಳ ಪರಿಶೀಲನೆ;

(ಸಿ) ಸೊಸೈಟಿಯು ನಿರ್ವಹಿಸಿದ ಕಾಮಗಾರಿಯ ಮೌಲ್ಯ ನಿರ್ಧರಣೆ; ಮತ್ತು

(ಡಿ) ಸೊಸೈಟಿಯ ಕಾಮಗಾರಿಯ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಮಹತ್ವದ್ದೆಂದು ಅಭಿಪ್ರಾಯಪಡುವ ಯಾವುದೇ ವಿಷಯದ ಮೇಲೆ ಸಾಮಾನ್ಯವಾಗಿ ಸರ್ಕಾರಕ್ಕೆ ಸಲಹೆ ನೀಡುವುದು

- ಇವುಗಳಿಗೆ ತಾನು ನೇಮಕ ಮಾಡಲು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರುವ ಸಮಿತಿಯನ್ನು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ರಚಿಸಬಹುದು ಮತ್ತು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂತಹ ರೀತಿಯಲ್ಲಿ ಸಮಿತಿಯು ಆ ಬಗ್ಗೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು.

(2) ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ, ಸಮಿತಿಯ ಸದಸ್ಯರುಗಳಿಗೆ ಸಂದಾಯವಾಗಬೇಕಾದ ಭತ್ಯೆಗಳು ಯಾವುವಾದರೂ ಇದ್ದರೆ ಅವು ಮತ್ತು ಸಮಿತಿಗೆ ಸಂಬಂಧಪಡುವ ಇತರ ವಿಷಯಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಸಮಿತಿಯು, (4)ನೇ ಉಪ-ಪ್ರಕರಣದ ಉಪಬಂಧಗಳಿಗೆ ಮತ್ತು ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ರಚಿಸಬಹುದಾದಂಥ ಯಾವುದೇ ನಿಯಮಗಳಿಗೆ ಒಳಪಟ್ಟು, ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) ಪುನರವಲೋಕನ, ಪರಿಶೀಲನೆ ಅಥವಾ ಮೌಲ್ಯನಿರ್ಧರಣೆ-ಇವುಗಳನ್ನು ಮಾಡಿಸಬೇಕಾದ ತನ್ನ ಉದ್ದೇಶದ ಬಗ್ಗೆ ಪ್ರತಿಯೊಂದು ಸಂದರ್ಭದಲ್ಲಿ ಸೊಸೈಟಿಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಸೊಸೈಟಿಯು, ಅಂತಹ ಪುನರವಲೋಕನ, ಪರಿಶೀಲನೆ ಅಥವಾ ಮೌಲ್ಯ ನಿರ್ಧರಣೆಯ ಸಮಯದಲ್ಲಿ ಹಾಜರಿದ್ದು, ಅಹವಾಲನ್ನು ಹೇಳಿಕೊಳ್ಳಲು ಹಕ್ಕನ್ನು ಹೊಂದಿರತಕ್ಕ ಒಬ್ಬ ಪ್ರತಿನಿಧಿಯನ್ನು ನೇಮಕ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(5) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯ ಯಾವುದೇ ವರದಿಯಲ್ಲಿ ಬಹಿರಂಗಪಡಿಸಲಾದಂತಹ ಪುನರವಲೋಕನ, ಪರಿಶೀಲನೆ ಅಥವಾ ಮೌಲ್ಯ ನಿರ್ಧರಣೆಯ ಫಲಿತಾಂಶಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರವು ಸೊಸೈಟಿಯ ಅಧ್ಯಕ್ಷನಿಗೆ ಪತ್ರ ಬರೆಯಬಹುದು ಮತ್ತು ಅಧ್ಯಕ್ಷನು ಆ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿದ್ದರೆ, ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕದ್ದು.

(6) ಕೇಂದ್ರ ಸರ್ಕಾರವು, (5)ನೇ ಉಪ-ಪ್ರಕರಣದ ಅನುಸರಣೆಯಲ್ಲಿ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸೊಸೈಟಿಯ ಅಧ್ಯಕ್ಷನಿಗೆ ಪತ್ರ ಬರೆದಾಗ ಮತ್ತು ಆ ಬಗ್ಗೆ ಅಧ್ಯಕ್ಷನು ಕೇಂದ್ರ ಸರ್ಕಾರಕ್ಕೆ ಸಮಾಧಾನವಾಗುವ ಹಾಗೆ ಯುಕ್ತ ಸಮಯದಲ್ಲಿ ಕ್ರಮವನ್ನು ಕೈಗೊಳ್ಳದೇ ಇರುವಾಗ, ಒದಗಿಸಲಾದ ಯಾವುದೇ ವಿವರಣೆಗಳನ್ನು ಅಥವಾ ಸೊಸೈಟಿಯ ಪರವಾಗಿ ಮಾಡಲಾದ ಯಾವುದೇ ಮನವಿಗಳನ್ನು ಕೇಂದ್ರ ಸರ್ಕಾರವು ಪರಿಶೀಲಿಸಿದ ನಂತರ ಆ ವರದಿಯಲ್ಲಿ ಹೇಳಲಾದ ಯಾವುದೇ ವಿಷಯಗಳ ಬಗ್ಗೆ, ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

**11. ಸೊಸೈಟಿಯು ಸಮಿತಿಗಳಿಗೆ ಸೌಲಭ್ಯಗಳನ್ನು ಒದಗಿಸುವುದು.**- 8ನೇ ಪ್ರಕರಣದ ಮೇರೆಗೆ ರಚಿತವಾದ ಮಂಡಲಿಗೆ ಮತ್ತು 9ನೇ ಪ್ರಕರಣ ಅಥವಾ 10ನೇ ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ಸಮಿತಿಗೆ ಅವು ತಮ್ಮ ಕರ್ತ ವ್ಯಗಳನ್ನು ನೆರವೇರಿಸಲು ಸಮರ್ಥಗೊಳಿಸುವ ಉದ್ದೇಶಕ್ಕಾಗಿ ಎಲ್ಲ ಅವಶ್ಯ ಸೌಲಭ್ಯಗಳನ್ನು ನೀಡಲು ಸೊಸೈಟಿಯು ಬದ್ಧವಾಗಿರತಕ್ಕದ್ದು.

**12. ಸೊಸೈಟಿಗೆ ನಿರ್ದೇಶನಗಳನ್ನು ನೀಡಲು ಅಧಿಕಾರ.**- ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಸೊಸೈಟಿಗೆ ತಾನು ಸೂಕ್ತವೆಂದು ಭಾವಿಸುವಂತಹ ನಿರ್ದೇಶನಗಳನ್ನು ನೀಡುವುದು

ಅವಶ್ಯವೆಂದು ಮನಗಂಡರೆ, ಕಾರಣಗಳನ್ನು ದಾಖಲುಮಾಡಿ ಸೊಸೈಟಿಗೆ ಅದನ್ನು ತಿಳಿಸಲು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳು,-

(ಎ) ನಿರ್ದೇಶನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯಲ್ಲಿ ಜ್ಞಾಪನ ಪತ್ರಗಳನ್ನು ತಿದ್ದುಪಡಿ ಮಾಡಲು ಅಥವಾ ಯಾವುದೇ ವಿನಿಯಮವನ್ನು ಮಾಡಲು ಅಥವಾ ಅದನ್ನು ತಿದ್ದುಪಡಿ ಮಾಡಲು;

(ಬಿ) ಸೊಸೈಟಿಯು ಕೈಗೊಂಡಿರುವ ಅಥವಾ ಕೈಗೊಳ್ಳಬೇಕಾಗಿರುವ ಕಾಮಗಾರಿಗಳಿಗೆ, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದೆಂದು ಭಾವಿಸುವಂಥ ರೀತಿಯಲ್ಲಿ ಆದ್ಯತೆಯನ್ನು ನೀಡಲು

- ಸೊಸೈಟಿಯನ್ನು ಅಗತ್ಯಪಡಿಸುವ ನಿರ್ದೇಶನಗಳನ್ನು ಒಳಗೊಂಡಿರಬಹುದು.

(2) ಈ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ನಿರ್ದೇಶನಗಳು, ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಸೊಸೈಟಿಯ ಜ್ಞಾಪನಪತ್ರ ಅಥವಾ ವಿನಿಯಮಗಳಲ್ಲಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**13. ನಿಯಂತ್ರಣದ ಪ್ರಕಾರ್ಯಗಳನ್ನು ವಹಿಸಿಕೊಳ್ಳಲು ಕೇಂದ್ರ ಸರ್ಕಾರದ ಅಧಿಕಾರ.** - (1) ಕೇಂದ್ರ ಸರ್ಕಾರವು,-

(i) ಸೊಸೈಟಿಯು 10ನೇ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ ಅಥವಾ 12ನೇ ಪ್ರಕರಣದ ಮೇರೆಗೆ ನೀಡಲಾದ ಯಾವುದೇ ನಿರ್ದೇಶನವನ್ನು ಜಾರಿಗೆ ತರುವಲ್ಲಿ ನ್ಯಾಯವಾದ ಮತ್ತು ಯುಕ್ತ ಕಾರಣವಿಲ್ಲದೇ ತಪ್ಪು ಮಾಡಿದೆಯೆಂದು; ಅಥವಾ

(ii) ಸೊಸೈಟಿಯ ಕೌನ್ಸಿಲು, ಸೊಸೈಟಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಧಿಕಾರಗಳನ್ನು ಮೀರಿದೆಯೆಂದು ಅಥವಾ ದುರುಪಯೋಗಪಡಿಸಿದೆಯೆಂದು

- ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನೇಮಕಾತಿಯನ್ನು ಮಾಡುವುದರ ವಿರುದ್ಧ ಕೇಂದ್ರ ಸರ್ಕಾರಕ್ಕೆ ಮನದಟ್ಟಾಗುವ ಹಾಗೆ ಆದೇಶದಲ್ಲಿ ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಕಾರಣ ತೋರಿಸಲು ಲಿಖಿತ ಆದೇಶದ ಮೂಲಕ ಸೊಸೈಟಿಗೆ ನಿರ್ದೇಶನ ನೀಡಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಆದೇಶದ ಮೂಲಕ ನಿಗದಿಪಡಿಸಲಾದ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ ಮನದಟ್ಟಾಗುವಂತೆ ಕಾರಣವನ್ನು ತೋರಿಸದೇ ಇದ್ದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಲಾದ ಒಂದು ಆದೇಶದ ಮೂಲಕ ಮತ್ತು ಅದರ ಕಾರಣಗಳನ್ನು ನಮೂದಿಸಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಎರಡು ವರ್ಷಗಳನ್ನು ಮೀರದ ಅವಧಿಯವರೆಗೆ ಸೊಸೈಟಿಯ ಆಡಳಿತವನ್ನು ಅಥವಾ ಸೊಸೈಟಿಯ ಯಾವುದೇ ಚಟುವಟಿಕೆಗಳನ್ನು ವಹಿಸಿಕೊಳ್ಳಲು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡಬಹುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ,-

(ಎ) ಸೊಸೈಟಿಯ ಆಡಳಿತವನ್ನು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ವಹಿಸಿಕೊಳ್ಳಲು ಆದೇಶದಲ್ಲಿ ಉಪಬಂಧ ಕಲ್ಪಿಸಿರುವಲ್ಲಿ -

(i) ಅಧ್ಯಕ್ಷರನ್ನೂ ಒಳಗೊಂಡು, ಕೌನ್ಸಿಲಿನ ಸದಸ್ಯರಾಗಿ ಹುದ್ದೆಯನ್ನು ಧಾರಣಮಾಡಿರುವ ಎಲ್ಲ ವ್ಯಕ್ತಿಗಳು ಅಂಥ ಹುದ್ದೆಗಳನ್ನು ತೆರವು ಮಾಡಿದ್ದಾರೆಂದು ಭಾವಿಸತಕ್ಕದ್ದು;

(ii) ಸೊಸೈಟಿಯ ಆಡಳಿತವನ್ನು ವಹಿಸಿಕೊಳ್ಳಲು, (2)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳು, ಸೊಸೈಟಿಗೆ ಸಂಬಂಧಪಟ್ಟಂತೆ, ಸಭೆಯಲ್ಲಾಗಲಿ ಅಥವಾ ಬೇರೆ

ಸಂದರ್ಭಗಳಲ್ಲಾಗಲಿ ಅಧ್ಯಕ್ಷರ ಅಥವಾ ಸೊಸೈಟಿಯ ಕೌನ್ಸಿಲಿನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(ಬಿ) ಸೊಸೈಟಿಯ ಯಾವುದೇ ಚಟುವಟಿಕೆಗಳ ನಿರ್ವಹಣೆಯನ್ನು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ವಹಿಸಿಕೊಳ್ಳಲು ಆದೇಶದಲ್ಲಿ ಉಪಬಂಧ ಕಲ್ಪಿಸಿರುವಾಗ, ಹಾಗೆ ನೇಮಕಹೊಂದಿದ ವ್ಯಕ್ತಿ ಅಥವಾ ವ್ಯಕ್ತಿಗಳು ಮಾತ್ರ, ಆ ಚಟುವಟಿಕೆಗಳ ಸಂಬಂಧದಲ್ಲಿ ಅಧ್ಯಕ್ಷರ ಅಥವಾ ಕೌನ್ಸಿಲ್‌ನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಕರ್ತವ್ಯಗಳನ್ನು ನೆರವೇರಿಸಲು ಹಕ್ಕುಳ್ಳವರಾಗಿರತಕ್ಕದ್ದು.

**14. ಅಧ್ಯಾರೋಹೀ ಪರಿಣಾಮ ಹೊಂದಿರುವ ಅಧಿನಿಯಮ.**- ಈ ಅಧಿನಿಯಮದ ಉಪಬಂಧಗಳು, ಜ್ಞಾಪನಪತ್ರ ಅಥವಾ ವಿನಿಯಮಗಳು ಅಥವಾ ಪಶ್ಚಿಮ ಬಂಗಾಳ ಸೊಸೈಟಿಗಳ ನೋಂದಣಿ ಅಧಿನಿಯಮ, 1961 (ಪಶ್ಚಿಮ ಬಂಗಾಳ ಅಧಿನಿಯಮ 1961ರ XXVI) ಅಥವಾ ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾದುದು ಏನೇ ಇದ್ದರೂ ಅವು ಪರಿಣಾಮವನ್ನು ಹೊಂದಿರತಕ್ಕದ್ದು.

**15. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(i) 8ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯು ಅನುಸರಿಸಬೇಕಾಗಿರುವ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ವಿಷಯಗಳು;

(ii) 8ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರ ಪದಾವಧಿ, ಅವರು ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾಗಿರುವ ಪ್ರಕ್ರಿಯೆ, ಅವರಲ್ಲಿ ಉಂಟಾದ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವ ರೀತಿ, ಅವರಿಗೆ ಸಂದಾಯ ಮಾಡತಕ್ಕ ಯಾವುದೇ ಭತ್ಯೆಗಳು ಮತ್ತು ಇತರ ಸಂಬಂಧಪಟ್ಟ ವಿಷಯಗಳು;

(iii) 9ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಸಮಿತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ, ಸಮಿತಿಯ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಏನಾದರೂ ಇದ್ದರೆ ಅವು ಮತ್ತು ಸಮಿತಿಗೆ ಸಂಬಂಧಪಟ್ಟ ಇತರ ವಿಷಯಗಳು;

(iv) 10ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ, ಸಮಿತಿಯ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಏನಾದರೂ ಇದ್ದರೆ ಅವು ಮತ್ತು ಸಂಬಂಧಪಟ್ಟ ಇತರ ವಿಷಯಗಳು;

(v) ಈ ಅಧಿನಿಯಮದ ಮೇರೆಗೆ ಅಗತ್ಯವಾಗಿ ರಚಿಸಬೇಕಾಗಿರುವ ಯಾವುದೇ ಇತರ ವಿಷಯ ಅಥವಾ ಅವುಗಳ ಸಂಬಂಧದಲ್ಲಿ ರಚಿಸಬಹುದಾದ ನಿಯಮಗಳು;

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ

ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

* * * * *